ದಿ: 29.01.2026 ರಂದು ವಾದಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು**: ಪ್ರತಿವಾದಿ ಪರ ಶ್ರೀಯುತ ಎ.ಎನ್.ವಿ. ವಕೀಲರಿಂದ.

ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ದಿ: 25.10.1945ರಂದು ನನ್ನ ತಂದೆ ನಂಜಪ್ಪರವರು ಚಿಕ್ಕನಂಜುಂಡಪ್ಪರವರಿಂದ ಆಸ್ತಿ ಸಂಖ್ಯೆ ಖಾನೇಷುಮಾರಿ 75 ವಿಸ್ತೀರ್ಣ ಪೂರ್ವಪಶ್ಚಿಮ-75 ಅಡಿ ಮತ್ತು ಉತ್ತರದಕ್ಷಿಣ-48 ಅಡಿ ವಿಸ್ತೀರ್ಣದ ಆಸ್ತಿಯನ್ನು ಖರೀದಿಸಿರುತ್ತಾರೆ ಎಂದರೆ ಸರಿ. ದಿ: 25.10.1945 ರ ಕ್ರಯ ಪತ್ರದಲ್ಲಿ ಪೂರ್ವದ ಕಡೆ ಸರ್ಕಾರಿ ಓಣಿ, ಪಶ್ಚಿಮದ ಕಡೆ ನಲ್ಲಪ್ಪ ಮತ್ತು ಕಾಳಪ್ಪ ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿ. ಸದರಿ ಪಶ್ಚಿಮದ ದಿಕ್ಕಿನ ಕಡೆ ನಮೂದಿಸಿರುವ ನಲ್ಲಪ್ಪ ಎನ್ನುವವರು ವಾದಿಯ ತಾತ ಎಂದರೆ ಸರಿ.

2. ದಿ: 22.01.1963 ರಂದು ನನ್ನ ತಂದೆ ಖರೀದಿಸಿದ್ದ ಆಸ್ತಿ ಕ್ರಮ ಸಂಖ್ಯೆ ಖಾನೇಷುಮಾರಿ 75 ವಿಸ್ತೀರ್ಣ ಪೂರ್ವಪಶ್ಚಿಮ-75 ಅಡಿ ಮತ್ತು ಉತ್ತರದಕ್ಷಿಣ-48 ಅಡಿ ಜಾಗದ ಪೈಕಿ ಉತ್ತರ ದಿಕ್ಕಿನ ಕಡೆಗೆ ಪೂರ್ವ ಪಶ್ಚಿಮ 75 ಅಡಿ ಮತ್ತು ಉತ್ತರದಕ್ಷಿಣ-24 ಅಡಿ ವಿಸ್ತೀರ್ಣದ ಜಾಗವನ್ನು ನಲ್ಲಪ್ಪರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಆ ರೀತಿ ನಿಮ್ಮ ತಂದೆ ನಲ್ಲಪ್ಪರವರಿಗೆ ಬರೆದುಕೊಟ್ಟ ಕ್ರಯ ಪತ್ರದಲ್ಲಿ ಪಶ್ಚಿಮದ ಕಡೆ ನಿಮ್ಮದೇ ವಟಾರ ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಸಮಯದಲ್ಲಿ ನಲ್ಲಪ್ಪರವರಿಗೆ ಸಂಬಂಧಿಸಿದ ಜಾಗ ಇತ್ತು ಎಂದು ನುಡಿಯುತ್ತಾರೆ. ಆ ರೀತಿ ನಾವು ನಲ್ಲಪ್ಪರವರಿಗೆ ಮಾರಾಟ ಮಾಡಿ ದಕ್ಷಿಣದ ಕಡೆಗೆ ಉಳಿಸಿಕೊಂಡಿದ್ದ ಪೂರ್ವ ಪಶ್ಚಿಮ 75 ಅಡಿ ಮತ್ತು ಉತ್ತರದಕ್ಷಿಣ-24 ಅಡಿ ಪೈಕಿ ಪಶ್ಚಿಮ ದಿಕ್ಕಿಗೆ ದಿ: 08.07.1985 ರಂದು ಗೌರಮ್ಮರವರಿಗೆ ಪೂರ್ವ ಪಶ್ಚಿಮ 37 ½ ಅಡಿ ಮತ್ತು ಉತ್ತರದಕ್ಷಿಣ-21 ಅಡಿ ವಿಸ್ತೀರ್ಣದ ಜಾಗವನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಆ ರೀತಿ ನಾವು ನಲ್ಲಪ್ಪರವರಿಗೆ ಮತ್ತು ಗೌರಮ್ಮರವರಿಗೆ ಮಾರಾಟ ಮಾಡಿದ ನಂತರ ಪೂರ್ವ ಪಶ್ಚಿಮ 37 ½ ಅಡಿ ಮತ್ತು ಉತ್ತರ ದಕ್ಷಿಣ 24 ಅಡಿ ವಿಸ್ತೀರ್ಣದ ಜಾಗವನ್ನು ಉಳಿಸಿಕೊಂಡಿರುತ್ತೇವೆ ಎಂದರೆ ಸರಿ. ಆ ರೀತಿ ನಾವು ಉಳಿಸಿಕೊಂಡಿರುವ ಪೂರ್ವ ಪಶ್ಚಿಮ 37 ½ ಅಡಿ ಮತ್ತು ಉತ್ತರ ದಕ್ಷಿಣ 24 ಅಡಿ ಜಾಗ ಹೊರತುಪಡಿಸಿ ಬೇರೆ ಯಾವುದೇ ಜಾಗ ನಮಗೆ ಇರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ನಾವು ನಲ್ಲಪ್ಪರವರಿಗೆ ಮಾರಾಟ ಮಾಡಿ ಉಳಿಸಿಕೊಂಡಿದ್ದ ಪೂರ್ವ ಪಶ್ಚಿಮ 75 ಅಡಿ ಪೈಕಿ ಗೌರಮ್ಮರವರಿಗೆ ನೀಡಿದ ಪೂರ್ವ ಪಶ್ಚಿಮ 37 ½ ಅಡಿ ವಿಸ್ತೀರ್ಣದ ಜಾಗವನ್ನು ಕಡಿಮೆಗೊಳಿಸಿ ನಿಮ್ಮ ಸ್ವಾಧೀನದಲ್ಲಿ ಪೂರ್ವ ಪಶ್ಚಿಮ ಎಷ್ಟು ಅಡಿ ಜಾಗ ಇದೆ ಎಂದು ಹೇಳಲು ಬರುತ್ತದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಪೂರ್ವ ಪಶ್ಚಿಮ 40 ಅಡಿ ಮತ್ತು ಉತ್ತರ ದಕ್ಷಿಣ 40 ಅಡಿ ವಿಸ್ತೀರ್ಣದ ಜಾಗ ಇರುತ್ತದೆ ಎಂದು ನುಡಿಯುತ್ತಾರೆ. ಆ ರೀತಿ ಹೆಚ್ಚುವರಿಯಾಗಿ ಪೂರ್ವ ಪಶ್ಚಿಮ 40 ಅಡಿ ಮತ್ತು ಉತ್ತರ ದಕ್ಷಿಣ 40 ಅಡಿ ಜಾಗ ಇರುತ್ತದೆ ಎನ್ನುವ ಕುರಿತು ನಮೂನೆ 9 ಮತ್ತು 10 ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಈ ಹಂತದಲ್ಲಿ ವಾದಿ ಪರ ವಕೀಲರು ಸಾಕ್ಷಿಗೆ ಪ್ರತಿವಾದಿ ಪರವಾಗಿ ನಿಶಾನೆಕರಿಸಲಾದ ದಾಖಲೆಗಳನ್ನು ತೋರಿಸಿ ಸದರಿ ನಮೂನೆ 9 ಮತ್ತು 10 ದಾಖಲೆಗಳನ್ನು ನೋಡಿ ಗುರುತಿಸುವಂತೆ ಸೂಚಿಸಿದ ಮೇರೆಗೆ ಸಾಕ್ಷಿಯು ದಾಖಲೆಗಳನ್ನು ನೋಡಿ ಕಾಣಿಸುತ್ತಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ನಾನು ಹೆಚ್ಚುವರಿ ವಿಸ್ತೀರ್ಣದ ಕುರಿತು ಖಾತೆ ಮಾಡಿಸಿಕೊಂಡಿರುತ್ತೇನೆ ಎಂದು ಪಂಚಾಯ್ತಿರವರು ನನ್ನ ಖಾತೆಯನ್ನು ವಜಾಗೊಳಿಸಿರುತ್ತಾರೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.